**ಸಿಸಿ ಸಂಃ 337/2018**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು : ಶ್ರೀನಾಥ್ | ಪಿ ಡಬ್ಲ್ಯೂ - 5 ಸಿ ಡಬ್ಲ್ಯೂ - 4 |
| ತಂದೆ ಹೆಸರುಃ ಪದ್ಮನಾಭಯ್ಯ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ: **02.08.2025** |
| ವಯಸ್ಸುಃ 39 ವರ್ಷ | |
| ವೃತ್ತಿಃ ವ್ಯಾಪಾರ | |
| ವಾಸ ಸ್ಥಳಃ ಚಿಂತಾಮಣಿ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ಚಾ.ಸಾ.1 ಮತ್ತು 3 ರವರ ಪರಿಚಯವಿರುತ್ತದೆ. ನಿ.ಪಿ.2 ರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **Ex.P-2(ಸಿ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ನಂದಗುಡಿ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ದಿ:20.07.2017 ರಂದು ನನ್ನ ಸ್ನೇಹಿತನಾದ ನಂದೀಶ್ ಗೆ ಅಪಘಾತವಾಗಿದ್ದು, ಮಹಜರುನ್ನು ಮುಗಬಾಳ ಗೇಟ್ ನ ಬಳಿ ಇರುವ ರಸ್ತೆಯಲ್ಲಿ ಬೆಳಗ್ಗೆ 9:00 ರಿಂದ 10:00 ಗಂಟೆಯವರೆಗೆ ನನ್ನ, ಚಾ.ಸಾ.1 ಮತ್ತು 3 ರವರ ಸಮಕ್ಷಮ ಮಾಡಿರುತ್ತಾರೆ. ಮಹಜರು ಕ್ರಮ ಜರುಗಿಸಿದ ಸಂದರ್ಭದಲ್ಲಿ ಒಂದು ಲಾರಿ ಮತ್ತು ಒಂದು ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರುಗೆ ನಾನು ಮತ್ತು ಚಾ.ಸಾ.1 ಮತ್ತು 3 ರವರ ಸ್ಥಳದಲ್ಲೇ ಸಹಿಯನ್ನು ಮಾಡಿರುತ್ತೇವೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

ಪೋಲಿಸರು ನನಗೆ ಮಹಜರುಗೆ ಬನ್ನಿ ಎಂದು ಯಾವುದೇ ನೋಟಿಸ್ ನೀಡಿರುವುದಿಲ್ಲ. ಅಪಘಾತವಾದ ದಿನ ನಾನು ನನ್ನ ದ್ವಿಚಕ್ರವಾಹನದಲ್ಲಿ ಬರುತ್ತಿದ್ದೆ. ಮಹಜರುನ್ನು ಅಪಘಾತವಾದ ದಿನದಂದೇ ಜರುಗಿಸಿರುತ್ತಾರೆ. ನಾನು ಪೋಲಿಸರಿಗೆ ಸ್ಥಳದ ಚಕ್ಕುಬಂದಿಗಳ ಬಗ್ಗೆ ಮತ್ತು ವಾಹನಗಳ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಂತಹ ದ್ವಿಚಕ್ರವಾಹನ

ಮತ್ತು ಲಾರಿಯ ನಂಬರ್ ನನಗೆ ತಿಳಿದಿರುವುದಿಲ್ಲ. ಸ್ಥಳದ ಚಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ನಿ.ಪಿ.2 ರಲ್ಲಿ ಏನು ಬರೆದಿದೆ ಎಂದು ಓದಿ ತಿಳಿದು, ಸಹಿ ಮಾಡಿರುತ್ತೇನೆ. ನಾನು ಪದವೀಧರನಾಗಿರುತ್ತೇನೆ. ನಿ.ಪಿ.2 ರಲ್ಲಿ ಲಾರಿಯನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಎಲ್ಲಿ ನಮೂದಾಗಿರುತ್ತದೆ ಎಂದು ಕೇಳಲಾಗಿ, ಸಾಕ್ಷಿ ನಿ.ಪಿ.2 ರ 16ನೇ ಸಾಲಿನಲ್ಲಿ ಅದರ ಬಗ್ಗೆ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಲಾರಿ ಬ್ರೋನ್ ಬಣ್ಣದಾಗಿತ್ತು. ಸ್ಥಳದಲ್ಲಿ ಲಾರಿಯನ್ನಲಾಗಲೀ, ದ್ವಿಚಕ್ರವಾಹನವಾಗಲೀ, ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರುನ್ನು ಪೋಲಿಸರು ಬರೆದಿರುತ್ತಾರೆ. ಸದರಿ ಪೋಲಿಸರ ಹೆಸರು ನನಗೆ ತಿಳಿದಿರುವುದಿಲ್ಲ. ಪೋಲಿಸರು ಸ್ಥಳಕ್ಕೆ ಬಂದಾಗ ಸುಮಾರು 25-30 ಜನ ಸೇರಿದ್ದರು, ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಮೃತ ನಂದೀಶ್ ರವರು ನನ್ನ ಸ್ನೇಹಿತನಾಗಬೇಕು. ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ಯಾವುದೇ ಮಹಜರು ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಚಾ.ಸಾ.1 ಮತ್ತು 3 ರವರು ಮಹಜರಗೆ ಪೋಲಿಸ್ ಠಾಣೆಯಲ್ಲೇ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರು ಕ್ರಮವನ್ನು ಜರುಗಿಸಿ, ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ಇನ್ನೂ ಏನೂ ಮಾಡಿರುವುದಿಲ್ಲ. ಮೃತ ನಂದೀಶ್ ರವರು ನನ್ನ ಸ್ನೇಹಿತನಾದ ಕಾರಣ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಓ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ